ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.

ಸಿ.ಸಿ.ನಂ.**24/2020**
ಸಿ.ಡಬ್ಲ್ಯೂ:**01**
ಪಿ.ಡಬ್ಲ್ಯೂ:**01**

| | |
|---|---|
| ಸಾಕ್ಷಿದಾರರ ಹೆಸರು | - ನೀಲವ್ವ ನಾಯಕೋಡಿ |
| ತಂದೆಯ/ಗಂಡನ ಹೆಸರು | - ಮಲ್ಲಪ್ಪ |
| ವಯಸ್ಸು | - 30 ವರ್ಷ |
| ಉದ್ಯೋಗ | - ಒಕ್ಕಲುತನ |
| ವಾಸಸ್ಥಳ | - ಬಬಲೇಶ್ವರ |

ಸಾಕ್ಷಿಯನ್ನು ದಿನಾಂಕ **20.09.2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು
ಮುಖ್ಯ ವಿಚಾರಣೆ : ಎ.ಪಿ.ಪಿ. ರವರಿಂದ

ಚಾ.ಸಾ.4 ನನ್ನ ಮಾವ. ಚಾ.ಸಾ.5 ನನ್ನ ಅತ್ತೆ. ಚಾ.ಸಾ.6 ನನ್ನ ಮಗ. ಚಾ.ಸಾ.7 ಮರಣ ಹೊಂದಿ ಸುಮಾರು 3 ವರ್ಷಗಳು ಆಗಿರುತ್ತೇವೆ. ಚಾ.ಸಾ.8 ರಿಂದ 10 ರವರ ಪರಿಚಯವಿದೆ. ನ್ಯಾಯಾಲಯದ ಮುಂದೆ ಇರುವ ನನಗೆ ಮಾವಂದಿರು ಆಗಬೇಕು.

ನನ್ನ ಮತ್ತು ಆರೋಪಿತರು ಜಮೀನು ಬಬಲೇಶ್ವರ ಗ್ರಾಮದಲ್ಲಿ ಇರುತ್ತವೆ. ನನ್ನ ಜಮೀನಿನ ಪಕ್ಕದಲ್ಲಿ 1 ನೇ ಆರೋಪಿಯ ಜಮೀನು ಇದೆ. ಸದರಿ ಜಮೀನು ಹೇಗೆ ಬಂದ ಬಗ್ಗೆ ನನಗೆ ಮಾಹಿತಿ ಇಲ್ಲ. ಸುಮಾರು 4 ವರ್ಷಗಳ ಹಿಂದೆ ನಮ್ಮ ಜಮೀನದಲ್ಲಿ ಟಿ.ಸಿ. ಅಳವಡಿಸಲು ಚಾ.ಸಾ.7 ರವರಿಗೆ ಗುತ್ತಿಗೆ ಕೊಟ್ಟಿದ್ದು ಅವರು ಬಂದಿರುತ್ತಾರೆ. ಆ ಕಾಲಕ್ಕೆ 6 ನೇ ಆರೋಪಿಯು ಹಲ್ಲೆ ಮಾಡಲು ಮುಂದೆ ಬಂದಿದ್ದು, ತದನಂತರ ಉಳಿದ ಆರೋಪಿತರು ಬಡಿಗೆ ಮತ್ತು ಗುದ್ದಲಿ ಕಾವು, ತೆಗೆದುಕೊಂಡು ಬಂದಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾ.ಸಾ.4 ರಿಂದ 6 ರವರು ಸ್ಥಳದಲ್ಲಿ ಇದ್ದರು. ಅಷ್ಟರಲ್ಲಿ ಎಲ್ಲಾ ಆರೋಪಿತರು ನಮ್ಮ ಎಲ್ಲರಿಗೂ ಹಲ್ಲೆ ಮಾಡಲು ಪ್ರಾರಂಭಿಸದರು. ಆರೋಪಿತರ ಪೈಕಿ 4 ನೇ ಆರೋಪಿ ನನಗೆ ಬಡಿಗೆಯಿಂದ ಸೊಂಟಕ್ಕೆ ಮತ್ತು ಮೈ ಕೈಗೆ ಹಲ್ಲೆ ಮಾಡಿರುತ್ತಾನೆ. ಉಳಿದ ಆರೋಪಿತರು ನನಗೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆ. ಚಾ.ಸಾ.4 ಈತನಿಗೆ 1 ನೇ ಆರೋಪಿ ಬಡಿಗೆಯಿಂದ ಕೈಗೆ ಹಲ್ಲೆ ಮಾಡಿರುತ್ತಾನೆ. ಚಾ.ಸಾ.5 ರವರಿಗೆ 2 ನೇ ಆರೋಪಿ ಗುದ್ದಲ ಕಾವಿನಿಂದ ತಲೆಗೆ ಹಲ್ಲೆ ಮಾಡಿರುತ್ತಾನೆ. ಚಾ.ಸಾ.6 ರವರಿಗೆ 3 ನೇ ಆರೋಪಿ ಈತನು ಬಡಿಗೆಯಿಂದ ಕೈಗೆ ಹಲ್ಲೆ ಮಾಡಿ ಮೊಬೈಲನ್ನು ಪುಡಿಪುಡಿ ಮಾಡಿರುತ್ತಾನೆ.

ಚಾ.ಸಾ.7 ಮತ್ತು 8 ರವರು ಜಗಳ ನೋಡಿ ಬಿಡಿಸಿರುತ್ತಾರೆ. ನಂತರ ನಾನು ಆಲಮೇಲ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ನಿ.ಪಿ.01 ಎಂದು ಗುರುತಿಸಲಾಯಿತು. ನನ್ನ ಮತ್ತು ಚಾ.ಸಾ.4 ರಿಂದ 6 ರವರ ಹಲ್ಲೆ ಮಾಡಿದ ಮೂರು ಬಡಿಗೆ ಮತ್ತು ಕಾವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ ಮು.ಮಾ.1 ರಿಂದ 4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿ ನೀಡಲಾಯಿತು. )

<u>ಪಾಟೀ ಸವಾಲು ಶ್ರೀ : ಎ.ಪಿ.ಪಿ. ರವರಿಂದ</u>

ನಾನು ನನ್ನ ಜಮೀನಿದಲ್ಲಿ ಬೋರವೆಲ್ ಹಾಕಿಸಿದ್ದ ಕಾರಣ ಆರೋಪಿತರು ಎಲ್ಲರು ಸಿಟ್ಟು ಆಗಿದ್ದರು ಎಂದರೆ ಸರಿ. ನಾನು ವಾಸವಾಗಿದ್ದ ಮನೆ ಸರಕಾರಿ ಪಡ ಜಮೀನು ಆಗಿತ್ತು ಮತ್ತು ನನಗೆ ಆರೋಪಿತರಿಗೆ ಅದರ ಸಂಬಂಧ ಜಗಳ ಇತ್ತು ಎಂದರೆ ಸರಿ. ಹೊಡೆ ಬಡಿ ಮಾಡುವ ಕಾಲಕ್ಕೆ 4 ನೇ ಆರೋಪಿ ನಾನು ಧರಿಸಿದ್ದ ಸೀರೆಯನ್ನು ಹಿಡಿದು ಜಗ್ಗಾಡಿರುತ್ತಾನೆ ಎಂದರೆ ಸರಿ. 3 ನೇ ಆರೋಪಿ ಚಾ.ಸಾ.6 ರವರಿಗೆ ನೆಲಕ್ಕೆ ಎತ್ತಿ ಹಾಕಿ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿ. ಚಾ.ಸಾ.5 ರವರ ತಲೆಗೆ ಗಾಯ ಆಗಿದ್ದರಿಂದ ಚೀರಾಡುತ್ತಿದ್ದರು ಎಂದರೆ ಸರಿ. ಆರೋಪಿತರು ಎಲ್ಲರು ಸೇರಿ ಇನ್ನೊಮ್ಮೆ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲ ಅಂತಾ ಪ್ರಾಣ ಬೆದರಿಕೆ ಸಹ ಹಾಕಿರುತ್ತಾರೆ ಎಂದರೆ ಸರಿ. ಸದರಿ ಜಗಳದಲ್ಲಿ ಚಾ.ಸಾ.4 ಈತನಿಗೆ ಗುಂಡಿಗೆ ಮತ್ತು ಎಡಗೈಗೆ ಭಾರಿ ಪೆಟ್ಟು ಆಗಿತ್ತು ಎಂದರೆ ಸರಿ. ಸದರಿ ಜಗಳವಾದಗ ಸಮಯ ಬೆಳ್ಳಿಗ್ಗೆ 8.00 ಆಗಿತ್ತು ಎಂದರೆ ಸರಿ. ನಾವು ಆಲಮೇಲ ಪೋಲಿಸ ಠಾಣೆಗೆ ಬಂದು ಅಲ್ಲಿ ಪೋಲಿಸರು ನಮಗೆ ಸರಕಾರಿ ಆಸ್ಪತ್ರೆಯಲ್ಲಿ ಉಪಚಾರ ಪಡೆದುಕೊಂಡು ನಂತರ ಬಂದು ಪೋಲಿಸ ಠಾಣೆಯಲ್ಲಿ ಫಿರ್ಯಾದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿ.

ಫೀರ್ಯಾದಿ ನೀಡಿದ ಎರಡು ದಿನಗಳ ನಂತರ ನಮ್ಮ ಮನೆ ಹತ್ತಿರ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಮುದ್ದೆ ಮಾಲಗಳನ್ನು ಸಾಕ್ಷಿದಾರರ ಸಮಕ್ಷಮ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ತೆಗೆದ ಛಾಯಾಚಿತ್ರವನ್ನು ನೋಡುತ್ತಿದ್ದು ಅದನ್ನು ನಿ.ಪಿ.02 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು : ಆರೋಪಿ ಪರ ಶ್ರೀ.ಆರ್.ಎಮ್.ಸಿ. ವಕೀಲರಿಂದ</u>

ಸುಮಾರು 4 ವರ್ಷದ ಹಿಂದೆ ಆರೋಪಿರು ಎಲ್ಲರು ಬಂದು ಮುದ್ದೆ ಮಾಲಗಳಿಂದ ನನಗೆ ಮತ್ತು ಚಾ.ಸಾ.ಅ 4 ರಿಂದ 6 ರವರಿಗೆ ಹೊಡೆ ಬಡಿ ಮಾಡಿರುತ್ತಾರೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 4 ನೇ ಆರೋಪಿ ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾ.ಸಾ.4 ಈತನಿಗೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಚಾ.ಸಾ.6 ರವರಿಗೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂಧರೆ ಸರಿಯಲ್ಲ.

ಜಗಳವಾದಗ ನನ್ನ ಗಂಡ ಊರಿನಲ್ಲಿ ಇರಲಿಲ್ಲ. ಆತನು ಬೇರೆ ಊರಿಗೆ ಬೆಳ್ಳಿಗೆ 7.00 ಗಂಟೆ ಸುಮಾರಿಗೆ ಹೋಗಿರುತ್ತಾನೆ. ನಮ್ಮ ಮನೆಯಿಂದ ಬಬಲೇಶ್ವರ ಸುಮಾರು 2.ಕಿ.ಮೀ ಅಂತರದಲ್ಲಿ ಇದೆ. ಬಬಲೇಶ್ವರದಿಂದ ನನ್ನ ಗಂಡ ಮನೆಗೆ ಬೆಳ್ಳಿಗ್ಗೆ 7.30 ಗಂಟೆ ಬಂದಿರುತ್ತಾನೆ. ಬಬಲೇಶ್ವರದಿಂದ ಆಲಮೇಲ ಪೋಲಿಸ ಠಾಣೆ ಸುಮಾರು 25 ಕಿ.ಮೀ ಅಂತರದಲ್ಲಿ ಇದೆ ಎಂದರೆ ಸಾಕ್ಷಿ ಇನ್ನು ಹೆಚ್ಚು ಅಂತರದಲ್ಲಿ ಇದೆ. ಬಬಲೇಶ್ವರದಿಂದ ಆಲಮೇಲೆಗೆ 1 ಗಂಟೆಯಲ್ಲಿ ಹೋಗಬಹುದು. ಬೆಳ್ಳಿಗ್ಗೆ 9.00 ಗಂಟೆ ಸುಮಾರಿಗೆ ನಾನು ಮತ್ತು ನನ್ನ ಗಂಡ ಸೇರಿ ಆಲಮೇಲಗೆ ಹೋಗಿರುತ್ತೇವೆ. ನಮ್ಮ ಹಿಂದೆ ಚಾ.ಸಾ.4 ರಿಂದ 6 ರವರು ಟಂಟಂನಲ್ಲಿ ಬಂದಿರುತ್ತಾರೆ. ನಾನು ಬೆಳ್ಳಿಗ್ಗೆ 9.00 ಗಂಟೆಗೆ ಆಲಮೇಲಗೆ ಹೋಗಿ ನೇರವಾಗಿ ಪೋಲಿಸ ಠಾಣೆಗೆ ಪಿರ್ಯಾದಿಯನ್ನು ಕೊಟ್ಟಿರುತ್ತೇನೆ. ಸದರಿ ದೂರನ್ನು ಬೆರಳಚ್ಚು ಮಾಡಿ ಕೊಟ್ಟಿರುತ್ತೇವೆ. ಪಿರ್ಯಾದಿಯನ್ನು ಕೊಡುವ ಕಾಲಕ್ಕೆ ಚಾ.ಸಾ.13 ಮತ್ತು 14 ರವರು ಹಾಜರಿದ್ದರು.

ನಾನು ಪಿರ್ಯಾದಿಯನ್ನು ಸಲ್ಲಿಸಿ ಆಲಮೇಲದಲ್ಲಿರುವ ಆಸ್ಪತ್ರೆಗೆ ಹೋಗಿರುತ್ತೇನೆ. ಆರೋಪಿತರು ಜಮೀನು ಸರಕಾರ ಪಡ ಆಗಿದ್ದರಿಂದ ಅದರಲ್ಲಿ ನಾನು ಮನೆ ಕಟ್ಟಿರುತ್ತೇನೆ ಎಂದರೆ ಸರಿ. 1 ನೇ ಆರೋಪಿ ಮತ್ತು ಚಾ.ಸಾ.4 ರವರ ಹೆಸರಿನಲ್ಲಿ ಇದ್ದ ಜಮೀನನ್ನು ವಾಟ್ನಿ ಮಾಡಿಕೊಂಡಿದ್ದು ಮತ್ತು 1 ನೇ ಆಋಓಪಿಯ ಪಾಲಿಗೆ ಬಂದ ಜಮಿನನ್ನು ಆತನಿಗೆ ಉಳಿಮೆ ಮಾಡಲು ಬಿಡದೆ ಅದು ನಮ್ಮ ಕಬ್ಜಾದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಮೇಲೆ ಕಬ್ಜಾವನ್ನು ಇಡಲು ಯಾವುದೇ ಜಗಳ ಆಗದಿದ್ದರು ಸಹ ಅವರ ಮೇಲೆ ಖೊಟ್ಟಿ ಪಿರ್ಯಾದಿ ಸಲ್ಲಿಸಿ ಈ ದಿನ ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ರೀತಿ ಜಗಳ ಆಗದೇ ಇದ್ದರು ಸಹ ನಾನು ಮತ್ತು ನನ್ನ ಗಂಡ ಆಲಮೇಲ ಪೋಲಿಸ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ಖೊಟ್ಟಿ ಪಿರ್ಯಾದಿಯನ್ನು ಬೆರಳಚ್ಚು ಮಾಡಿ ಕೊಟ್ಟಿರುತ್ತೇವೆ ಎಂಧರೆ ಸರಿಯಲ್ಲ.

ಪೋಲಿಸರು ಜಗಳ ಆಧ 2 ದಿನಗಳಿಗೆ ಸ್ಥಳಕ್ಕೆ ಬಂದಾಗ ಮದ್ಯಾಹ್ನ 1 ಗಂಟೆ ಆಗಿತ್ತು. ಪೋಲಿಸರು ಸ್ಥಳದಲ್ಲಿ ಸುಮಾರು 1 ಗಂಟೆ ಕಾಲ ಇದ್ದರು. ಗುನ್ನಾ ಜಾಗಕ್ಕೆ ಪೋಲಿಸರು

ಮಾತ್ರ ಬಂದಿದ್ದರು. ಗುನ್ಹಾ ಜಾಗದ ಚೆಕಬಂದಿ ನಾನು ಶಾಲೆ ಕಲಿತಿರುವುದಿಲ್ಲ ಆದ ಕಾರಣ ಹೇಳಲು ಬರುವುದಿಲ್ಲ. ಪೋಲಿಸರು ಗುನ್ಹಾ ಸ್ಥಳಕ್ಕೆ ಪಂಚನಾಮೆ ಮಾಡಲು ಬಂದಿರುವುದಿಲ್ಲ, ಮನೆ ಹತ್ತಿರ ಬಿದ್ದ ಬಡಿಗೆಗಳನ್ನು ನಾನು ತೆಗೆದುಕೊಂಡು ಹೋಗಿ ಠಾಣೆಗೆ ಕೊಟ್ಟು ಈ ದಿನ ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರೂ ಯಾವುದೇ ರೀತಿಯ ಗುನ್ಹೆ ಮಾಡಿರುವುದಿಲ್ಲ. ನಾನು ನ್ಯಾಯಾಲಯದ ಮುಂದೆ ಬಂದು ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪ ಮಾಡಿ

ಮರು ವಿಚಾರಣೆ ಇಲ್ಲ

(ಸಾಕ್ಷಿಯ ಹೇಳಿಕೆಯಂತೆ ತೆರೆ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ.

**( ಎ.ಆರ್.ಎ.ಮುಲ್ಲಾ)**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಸಿಂದಗಿ.